**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

ಸಂಖ್ಯೆ:E- 2157633, DPUE-ACA0OTH/232/2026-ACADEMIC, ದಿನಾಂಕ: 11-05-2026

## ಸುತ್ತೋಲೆ

**ವಿಷಯ:** 2026-27 ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ" ಘಟಕ ಆಧಾರಿತ ಮೌಲ್ಯಮಾಪನ" (Lesson Based Assessment - LBA) ಅನುಷ್ಠಾನಗೊಳಿಸುವ ಕುರಿತು.

*****

ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ನಿರಂತರವಾಗಿ ಮೌಲ್ಯಮಾಪನ ಮಾಡಿ, ಪ್ರತಿ ವಿಷಯದ ಘಟಕ ಮಟ್ಟದಲ್ಲಿ ಅವರ ಆಳವಾದ ತಿಳುವಳಿಕೆಯನ್ನು ಅರಿತುಕೊಳ್ಳುವುದರ ಜೊತೆಗೆ ವಾರ್ಷಿಕ ಪರೀಕ್ಷೆಯ ಫಲಿತಾಂಶವನ್ನು ಉತ್ತಮಪಡಿಸುವ ಉದ್ದೇಶದಿಂದ, ಪ್ರಸಕ್ತ ಶೈಕ್ಷಣಿಕ ಸಾಲಿನಿಂದ (2026-27) ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪದವಿ ಪೂರ್ವ ತರಗತಿಗಳಿಗೆ (For 1st and 2nd PU) ಘಟಕ ಆಧಾರಿತ ಮೌಲ್ಯಮಾಪನ (Lesson Based Assessment - LBA) ಪದ್ಧತಿಯನ್ನು ಕಡ್ಡಾಯವಾಗಿ ಜಾರಿಗೆ ತರಲು ಹಾಗೂ ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ಗ್ರೇಡ್ ಆಧಾರಿತವಾಗಿ ನಿರ್ವಹಿಸಲು ತೀರ್ಮಾನಿಸಲಾಗಿದೆ. ಈ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ:

## I. ಮೌಲ್ಯಮಾಪನ ಪ್ರಕ್ರಿಯೆ ಮತ್ತು ಉಪನ್ಯಾಸಕರ ಜವಾಬ್ದಾರಿಗಳು:-

1. **ಘಟಕ ಆಧಾರಿತ ಮೌಲ್ಯಮಾಪನಗಳ (LBA) ಗಳ ಸಂಖ್ಯೆ:** ಒಂದು ಶೈಕ್ಷಣಿಕ ಸಾಲಿನಲ್ಲಿ ಪ್ರತಿಯೊಂದು ವಿಷಯಕ್ಕೂ ಕಡ್ಡಾಯವಾಗಿ 10 ಘಟಕ ಆಧಾರಿತ ಮೌಲ್ಯಮಾಪನಗಳನ್ನು (LBA) ನಡೆಸತಕ್ಕದ್ದು. ಈ ಉದ್ದೇಶಕ್ಕಾಗಿ ಪ್ರತಿ ವಿಷಯದ ಪಠ್ಯವಸ್ತುವನ್ನು 10 ಘಟಕಗಳಾಗಿ ವಿಭಾಗಿಸಿ ಇಲಾಖೆಯಿಂದ ನಿಗದಿಪಡಿಸಲಾಗುವುದು. ಹಾಗೆಯೇ, ಪ್ರತಿ ಘಟಕಕ್ಕೆ ಅನುಗುಣವಾಗಿ ಮಾದರಿ ಪ್ರಶ್ನೆಪತ್ರಿಕೆಗಳನ್ನು ಇಲಾಖೆಯಿಂದ ಸಿದ್ಧಪಡಿಸಿ ಒದಗಿಸಲಾಗುವುದು.

2. **ಪ್ರಶ್ನೆಪತ್ರಿಕೆ ಸಿದ್ಧತೆ:** ನಿಗದಿತ ಪಾಠ/ಘಟಕ (Unit) ಮುಗಿದ ತಕ್ಷಣ, ಆಯಾ ಘಟಕಕ್ಕೆ ಸಂಬಂಧಿಸಿದಂತೆ ಕಡ್ಡಾಯವಾಗಿ 30 ಅಂಕಗಳ ಪ್ರಶ್ನೆಪತ್ರಿಕೆಯನ್ನು ಇಲಾಖೆ ನೀಡಿದ ಮಾದರಿ ಪ್ರಶ್ನೆಪತ್ರಿಕೆಯಂತೆ ಸಿದ್ಧಪಡಿಸಬೇಕು.

3. **ಅಂಕಗಳ ವಿಂಗಡಣೆ:** 30 ಅಂಕಗಳ ಪ್ರಶ್ನೆಪತ್ರಿಕೆಯು ಈ ಕೆಳಗಿನ ಸ್ವರೂಪದಲ್ಲಿರಬೇಕು:
    - 10 ಅಂಕಗಳು: ಬಹು ಆಯ್ಕೆಯ ಪ್ರಶ್ನೆಗಳಿಗೆ (Multiple Choice Questions - MCQ).
    - 20 ಅಂಕಗಳು: ವಿವರಣಾತ್ಮಕ ಉತ್ತರ ಬರೆಯುವ ಪ್ರಶ್ನೆಗಳಿಗೆ (Descriptive Answers).
4. **ಮಾದರಿ ಪ್ರಶ್ನೆಪತ್ರಿಕೆ:** ಪ್ರತಿ ವಿಷಯಕ್ಕೆ ಘಟಕವಾರು ಮಾದರಿ ಪ್ರಶ್ನೆಪತ್ರಿಕೆಗಳನ್ನು ಇಲಾಖೆಯಿಂದ ಸಿದ್ಧಪಡಿಸಿ ನೀಡಲಾಗುವುದು.
5. **ಪ್ರಶ್ನೆ ಕೋಠಿಯ ಬಳಕೆ:** ಪ್ರಶ್ನೆಗಳನ್ನು ಕಡ್ಡಾಯವಾಗಿ ಇಲಾಖೆ ಸಿದ್ಧಪಡಿಸಿರುವ 'ಪ್ರಶ್ನೆ ಕೋಠಿ' (Question Bank) ನಿಂದಲೇ ಆಯ್ಕೆ ಮಾಡತಕ್ಕದ್ದು.
6. **ಮೌಲ್ಯಮಾಪನ ಮತ್ತು SATS ನಮೂದು:** ಪರೀಕ್ಷೆ ಮುಗಿದ ನಂತರ ಶೀಘ್ರವಾಗಿ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ, ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಕಡ್ಡಾಯವಾಗಿ SATS (Student Achievement Tracking System) ತಂತ್ರಾಂಶದಲ್ಲಿ ನಮೂದಿಸತಕ್ಕದ್ದು ಮತ್ತು ಪಡೆದ ಅಂಕಗಳಿಗೆ ಅನುಗುಣವಾಗಿ ಗ್ರೇಡ್‌ಗಳು ಸ್ವಯಂ ಚಾಲಿತವಾಗಿ SATS ನಲ್ಲಿ ಪ್ರಕಟವಾಗುವುದು.
7. ಘಟಕ ಪರೀಕ್ಷೆಗಳನ್ನು ನಡೆಸುವ ವೇಳಾ ಪಟ್ಟಿಯನ್ನು ಸಿದ್ಧಪಡಿಸಿ ಇಲಾಖೆಯಿಂದ ಮುಂದಿನ ದಿನಗಳಲ್ಲಿ ನೀಡಲಾಗುವುದು.
8. PMSHRI ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಾಯೋಗಿಕ ಆಧಾರದ ಮೇಲೆ LBA ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು IIT ಧಾರವಾಡ ಸಹಯೋಗದೊಂದಿಗೆ ಕೃತಕ ಬುದ್ದಿಮತ್ತೆ (AI) ಬಳಸಿ ಮಾಡಲಾಗುತ್ತದೆ. ಇದಕ್ಕಾಗಿ ವಿವರವಾದ ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ನೀಡಲಾಗುವುದು.

## II. ಪ್ರಾಂಶುಪಾಲರ ಜವಾಬ್ದಾರಿಗಳು:

1. ತಮ್ಮ ಕಾಲೇಜಿನಲ್ಲಿ ಎಲ್ಲಾ ವಿಷಯಗಳ ಉಪನ್ಯಾಸಕರು ಶೈಕ್ಷಣಿಕ ವರ್ಷದಲ್ಲಿ ಕಡ್ಡಾಯವಾಗಿ 10 ಘಟಕ ಪರೀಕ್ಷೆಗಳನ್ನು (LBA) ನಿಗದಿತ ಕಾಲಮಿತಿಯೊಳಗೆ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದು.
2. ಪ್ರಶ್ನೆಪತ್ರಿಕೆಗಳು ಇಲಾಖೆ ನೀಡಿರುವ ನಿಗದಿತ ಮಾದರಿಯಲ್ಲಿ (10 MCQ, 20 ವಿವರಣಾತ್ಮಕ) ಹಾಗೂ ಆಯ್ಕೆ ಮಾಡುವ ಪ್ರಶ್ನೆಗಳು ಪ್ರಶ್ನೆ ಕೋಠಿಯಿಂದಲೇ ಆಯ್ದು ಸಿದ್ಧವಾಗಿರುವುದನ್ನು ಪರೀಕ್ಷೆಗೂ ಮುನ್ನ ಪರಿಶೀಲಿಸುವುದು.
3. ಎಲ್ಲಾ 10 LBA ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು, ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಇಲಾಖಾಧಿಕಾರಿಗಳ ತಪಾಸಣೆಗಾಗಿ ಸುಸ್ಥಿತಿಯಲ್ಲಿ ಕಾಯ್ದಿರಿಸುವುದು.
4. ಘಟಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಧರಿಸಿ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿ ತರಗತಿಗಳನ್ನು ತೆಗೆದುಕೊಳ್ಳಲು ವ್ಯವಸ್ಥೆ ಕಲ್ಪಿಸುವುದು.

5. ಪ್ರತಿಯೊಬ್ಬ ಉಪನ್ಯಾಸಕರು ಮೌಲ್ಯಮಾಪನದ ನಂತರ SATS ತಂತ್ರಾಂಶದಲ್ಲಿ ಅಂಕಗಳನ್ನು ನಮೂದಿಸಿರುವುದನ್ನು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳುವುದು ಮತ್ತು ನಿಯಮಿತವಾಗಿ ಮೇಲ್ವಿಚಾರಣೆ ಮಾಡುವುದು ಹಾಗೂ ಜಿಲ್ಲೆಯಿಂದ ತರಬೇತಿ ಪಡೆದಿರುವ ಸಂಪನ್ಮೂಲ ವ್ಯಕ್ತಿಯ ಸಹಾಯ ಪಡೆದುಕೊಳ್ಳುವುದು.
6. ಪೋಷಕರಿಗೆ ಘಟಕ ಪರೀಕ್ಷೆಯ ಅಂಕಗಳ / ಗ್ರೇಡ್‌ಗಳ ಮಾಹಿತಿಯ ಸಂದೇಶ ಸ್ವಯಂಚಾಲಿತವಾಗಿ ರವಾನೆಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

## III. ಜಿಲ್ಲಾ ಉಪ ನಿರ್ದೇಶಕರ ಜವಾಬ್ದಾರಿಗಳು:

1. ತಮ್ಮ ಜಿಲ್ಲೆಯ ವ್ಯಾಪ್ತಿಗೆ ಬರುವ ಎಲ್ಲಾ ಕಾಲೇಜುಗಳಿಗೆ ಈ ಸುತ್ತೋಲೆಯನ್ನು ತ್ವರಿತವಾಗಿ ತಲುಪಿಸಿ, ವರ್ಷದಲ್ಲಿ ಪ್ರತಿ ವಿಷಯಕ್ಕೆ 10 ಘಟಕ ಆಧಾರಿತ ಮೌಲ್ಯಮಾಪನಗಳ (LBA) ಗಳ ಅನುಷ್ಠಾನದ ಬಗ್ಗೆ ಅಗತ್ಯ ಮಾರ್ಗದರ್ಶನ ಮತ್ತು ನಿರ್ದೇಶನಗಳನ್ನು ನೀಡುವುದು.
2. ಕಾಲೇಜುಗಳಿಗೆ ಭೇಟಿ ನೀಡಿದಾಗ, ಕಡ್ಡಾಯವಾಗಿ ಘಟಕ ಆಧಾರಿತ ಮೌಲ್ಯಮಾಪನಗಳ (LBA) ಅನುಷ್ಠಾನದ ಬಗ್ಗೆ ಪರಿಶೀಲನೆ ನಡೆಸುವುದು.
3. SATS ತಂತ್ರಾಂಶದಲ್ಲಿ ತಮ್ಮ ಜಿಲ್ಲೆಯ ಎಲ್ಲಾ ಕಾಲೇಜುಗಳ 10 ಘಟಕ ಆಧಾರಿತ ಮೌಲ್ಯಮಾಪನಗಳ (LBA) ಅಂಕಗಳ ನಮೂದಿನ ಪ್ರಗತಿಯನ್ನು (Progress) ನಿಯಮಿತವಾಗಿ ಪರಿಶೀಲಿಸುವುದು.
4. ಒಂದು ವೇಳೆ ಯಾವುದೇ ಕಾಲೇಜಿನವರು ಉದ್ದೇಶಪೂರ್ವಕವಾಗಿ ಘಟಕ ಆಧಾರಿತ ಮೌಲ್ಯಮಾಪನಗಳ (LBA) ಅನುಷ್ಠಾನಗೊಳಿಸದೆ ಇದ್ದಲ್ಲಿ, ಸದರಿ ವಿಷಯವನ್ನು ಜಿಲ್ಲಾ ಉಪನಿರ್ದೇಶಕರು ಕೇಂದ್ರ ಕಚೇರಿಗೆ ಕಡ್ಡಾಯವಾಗಿ ವರದಿ ಮಾಡುವುದು.
5. ಘಟಕ ಆಧಾರಿತ ಮೌಲ್ಯಮಾಪನ (LBA) ಅಂಕ/ಗ್ರೇಡ್‌ಗಳಿಗೂ ಆಂತರಿಕ ಅಂಕಗಳಿಗೂ (IA) ಯಾವುದೇ ಸಂಬಂಧ ಇರುವುದಿಲ್ಲ.
6. ವಾರ್ಷಿಕ ಪರೀಕ್ಷೆಯ ಫಲಿತಾಂಶಕ್ಕೆ ಘಟಕ ಆಧಾರಿತ ಮೌಲ್ಯಮಾಪನಗಳ (LBA) ಅಂಕ/ಗ್ರೇಡ್ ಗಳನ್ನು ಪರಿಗಣಿಸಲಾಗುವುದಿಲ್ಲ.
7. ಘಟಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಧರಿಸಿ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿ ತರಗತಿಗಳನ್ನು ತೆಗೆದುಕೊಂಡಿರುವ ಬಗ್ಗೆ ಜಿಲ್ಲಾ ಉಪನಿರ್ದೇಶಕರು ಖಾತರಿ ಪಡಿಸಿಕೊಳ್ಳುವುದು.
8. ಜಿಲ್ಲಾ ಉಪನಿರ್ದೇಶಕರು ಇಲಾಖೆಯಿಂದ ತರಬೇತಿ ಪಡೆದ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಂಡು ತಮ್ಮ ಜಿಲ್ಲಾ ಹಂತದಲ್ಲಿ ಎಲ್ಲಾ ಉಪನ್ಯಾಸಕರಿಗೆ ತರಬೇತಿ ನೀಡಲು ವ್ಯವಸ್ಥೆ ಮಾಡುವುದು.

ನಿಗದಿತ 10 ಘಟಕ ಆಧಾರಿತ ಮೌಲ್ಯಮಾಪನಗಳ (LBA) ಪ್ರಕ್ರಿಯೆಯನ್ನು ಪೂರ್ಣಗೊಳಿಸದೇ ವಿಳಂಬ ಮಾಡುವ ಅಥವಾ SATSನಲ್ಲಿ ಅಂಕಗಳನ್ನು ನಮೂದಿಸದ ಕಾಲೇಜುಗಳ ಪ್ರಾಂಶುಪಾಲರಿಗೆ, ಇಲಾಖೆಯ ನಿಯಮಾನುಸಾರ ಘಟಕ ಪರೀಕ್ಷೆಗಳನ್ನು ಕಡ್ಡಾಯವಾಗಿ ನಡೆಸಿ ಅಂಕಗಳನ್ನು SATSನಲ್ಲಿ ದಾಖಲಿಸುವಂತೆ ಸೂಚಿಸುವುದು. ಉಪನಿರ್ದೇಶಕರು ನೀಡಿದ ಸೂಚನೆಗಳನ್ನು ಪಾಲಿಸದಿದ್ದಲ್ಲಿ, ಕಾರಣಕರ್ತರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಶಿಫಾರಸು ಮಾಡುವ ವರದಿಯನ್ನು ನಿರ್ದೇಶನಾಲಯಕ್ಕೆ ಕಡ್ಡಾಯವಾಗಿ ಕಳುಹಿಸತಕ್ಕದ್ದು.

ಒಂದು ವೇಳೆ ಇಂತಹ ನಿರ್ಲಕ್ಷ್ಯತೆ ಗಮನಕ್ಕೆ ಬಂದರೆ ಮತ್ತು ಉಪನಿರ್ದೇಶಕರು ತಮ್ಮ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡಲು ವಿಫಲವಾದಲ್ಲಿ, ಕಾಲೇಜಿನ ನಿರ್ಲಕ್ಷ್ಯತೆ ಮತ್ತು ವಿಳಂಬಕ್ಕೆ ಉಪನಿರ್ದೇಶಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.

ಈ ಪ್ರಕ್ರಿಯೆಯು ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಯ ಸಿದ್ಧತೆಗೆ ಅತ್ಯಂತ ಪೂರಕವಾಗಿರುವುದರಿಂದ, ಸಂಬಂಧಪಟ್ಟ ಎಲ್ಲರೂ ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಕಾರ್ಯಗತಗೊಳಿಸತಕ್ಕದ್ದು.

Digitally signed by
BHARATH
Date: 11-05-2026
11:07:21

ನಿರ್ದೇಶಕರು
ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)

ಇವರಿಗೆ ,

1. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (DDPUE), ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) - ಸೂಕ್ತ ಕ್ರಮಕಾಗಿ.
2. ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಸೂಕ್ತ ಕ್ರಮಕಾಗಿ.
3. ಸಹಾಯಕ ನಿರ್ದೇಶಕರು, ಇ-ಆಡಳಿತ, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) , ಮಲ್ಲೇಶ್ವರಂ, ಬೆಂಗಳೂರು-560 012-ಇಲಾಖಾ ಅಂತರ್ಜಾಲದಲ್ಲಿ ಅಳವಡಿಸಲು.

ಪ್ರತಿಗಳು:

1. ಆಪ್ತ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರು- ಮಾಹಿತಿಗಾಗಿ.
2. ಆಪ್ತ ಕಾರ್ಯದರ್ಶಿಗಳು, ಅಪರ ಮುಖ್ಯ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560 001- ಮಾಹಿತಿಗಾಗಿ.
3. ಕಛೇರಿ ಪ್ರತಿ.